**ಸಾಕ್ಷಿಯನ್ನು ದಿನಾಂಕ 30.01.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು- ಪಿರ್ಯಾದಿ ಪರ ವಕೀಲರಿಂದ:-**

ನಿ.ಪಿ1 ಚೆಕ್ ನನ್ನದೇ ಮತ್ತು ಅದರಲ್ಲಿ ಇರುವ ಸಹಿಯು ನನ್ನದೇ. ಅದೇ ರೀತಿ ನನ್ನ ಹೆಂಡತಿ ಸಹ ಪಿರ್ಯಾದಿಗೆ ಒಂದು ಚೆಕ್ ಅನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಚೆಕ್ ಮೊತ್ತ ಎರಡು ಲಕ್ಷಕ್ಕೆ ಎಂದರೆ ಸರಿಯಲ್ಲ. ಪಿರ್ಯಾದಿಯು ನನ್ನ ಹೆಂಡತಿಯ ಮೇಲೆ ಸಹ ಒಂದು ಚೆಕ್ ಬೌನ್ಸ್ ಪ್ರಕರಣ ಹಾಕಿದ್ದಾರೆ ಎಂದರೆ ಹೌದು. ಈ ಪ್ರಕರಣ ಹಾಕುವ ಪೂರ್ವದಲ್ಲಿ ಪಿರ್ಯಾದಿಯು ಚೆಕ್ ಬೌನ್ಸ್ ಆಗಿರುವ ಬಗ್ಗೆ ನನಗೆ ನೋಟೀಸು ನೀಡಿದ್ದಾರೆ ಎಂದರೆ ಹೌದು, ಸದರಿ ನೋಟೀಸಿಗೆ ನಾನು ಪ್ರತಿ ಉತ್ತರವನ್ನು ನಿ.ಪಿ 8 ರಂತೆ ನೀಡಿದ್ದೇನೆ ಎಂದರೆ ಸರಿ. ಸದರಿ ಪ್ರತಿ ಉತ್ತರವನ್ನು ಕೊಡುವಾಗ ನಾನು ಮತ್ತು ನನ್ನ ಹೆಂಡತಿ ನಮ್ಮ ವಕೀಲರಿಗೆ ಮಾಹಿತಿ ನೀಡಿದ್ದೇವೆ ಎಂದರೆ ಸರಿ. ಪ್ರತಿ ಉತ್ತರದಲ್ಲಿ ನಾನು ಮತ್ತು ನನ್ನ ಹೆಂಡತಿ ಸೇರಿ ಪಿರ್ಯಾದಿಯಿಂದ ನಾಲ್ಕು ಲಕ್ಷ ಹಣ ಪಡೆದಿದ್ದೇವೆ ಎಂದದು ತಿಳಿಸಿದ್ದೇನೆ ಎಂದರೆ ಅದು ತಪ್ಪಾಗಿ ತಿಳಿಸಿದ್ದೇನೆ ಎಂದು ನುಡಿದಿರುತ್ತಾರೆ.

2. ಪಿರ್ಯಾದಿಯಿಂದ ನಾನು ಮತ್ತು ನನ್ನ ಹೆಂಡತಿ ಮತ್ತು ನನ್ನ ಸ್ನೇಹಿತರು ಸೇರಿ ರೂ.30,000/- ಪೈನಾನ್ಸ್ ಗೆ ಪಡೆದೆವು. ಈ ವಿಚಾರವನ್ನು ನಾನು ನನ್ನ ಪ್ರತಿ ಉತ್ತರದಲ್ಲಿ ತಿಳಿಸಿಲ್ಲ. ಪಿರ್ಯಾದಿಯು ನಮ್ಮ ಮನೆಯ ಪಕ್ಕದವರಲ್ಲ. ಪ್ರತಿ ಉತ್ತರದಲ್ಲಿ ನಾನು ಮತ್ತು ಪಿರ್ಯಾದಿಯು ಅಕ್ಕಪಕ್ಕದ ಮನೆಯವರು ಎಂದು ಒಪ್ಪಿಕೊಂಡಿದ್ದೇವೆ ಎಂದು ಇದೆ ಎಂದರೆ ಆ ರೀತಿ ನಾನು ವಕೀಲರಿಗೆ ಮಾಹಿತಿ ಕೊಟ್ಟಿಲ್ಲ ಎಂದು ನುಡಿದಿರುತ್ತಾರೆ. ಪೈನಾನ್ಸ್ ಗೆ ಹಣವನ್ನು ಪಿರ್ಯಾದಿಯಿಂದ ಪಡೆದೆ ಎಂದು ನಿ.ಪಿ.8ರಲ್ಲಿ ತಿಳಿಸಿಲ್ಲ.

3. ನನ್ನ ಮುಖ್ಯ ವಿಚಾರಣೆಯಲ್ಲಿ ಹರೀಶ್ ಕಡೆಯಿಂದ ಇಂತಿಷ್ಟು ಹಣ ಪಡೆದಿದ್ದೇನೆ ಎಯಿ ಹೇಳಿಲ್ಲ ಆದರೆ ಎಲ್ಲಾ ಸೇರಿ ನಾಲ್ಕು ಲಕ್ಷ ಪಡೆದೆ. ನಾನು ಪಿರ್ಯಾದಿಯನ್ನು ನೋಡಿಲ್ಲ. ಈ ದಿನ ಪಿರ್ಯಾದಿ ನ್ಯಾಯಾಲಯದಲ್ಲಿ ಇದ್ದಾರೆ. ನಿ.ಪಿ.8ರಲ್ಲಾಗಲೀ ಅಥವಾ ನನ್ನ ಹಿಂದಿನ ಮುಖ್ಯ ವಿಚಾರಣೆಯಲ್ಲಾಗಲೀ ಪಿರ್ಯಾದಿ ನನಗೆ ಗೊತ್ತಿಲ್ಲ, ಅವರೊಂದಿಗೆ ನಾನು ಯಾವುದೇ ವ್ಯವಹಾರ ಮಡಿಲ್ಲ, ನಾನು ಹರೀಶ್ ನೊಂದಿಗೆ ವ್ಯವಹಾರ ಮಾಡಿರುವುದು ಎದು ಹೇಳಿಲ್ಲ, ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ.

4. ರವಿಕುಮಾರ್ ನನ್ನ ಸ್ನೇಹಿತ. ಇವರು ಸಹ ನನ್ನೊಂದಿಗೆ ಪಿರ್ಯಾದಿ ಚಂದ್ರು ಬಳಿ ಮೂರು ವರ್ಷಗಳ ಹಿಂದೆ ಪೈನಾನ್ಸ್ ಪಡೆದರು. ಪೈನಾನ್ಸ್ ಪಡೆದಾಗ ನಾನು ಸಹ ಇದ್ದೆ. ನಾನು

ಪಡೆದಂತಹ ಫೈನಾನ್ಸ್ ಅನ್ನು ವಾರ ವಾರ ರೂ.3,000/- ದಂತೆ ಮರುಪಾವತಿಸಿದ್ದೇನೆ. ಮರುಪಾವತಿಸಿದಾಗ ಯಾವುದೇ ಚೀಟಿಯನ್ನು ಪಡೆದಿಲ್ಲ. ಈ ವಿಚಾರವನ್ನು ಸಹ ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ, ಹಿಂದೆ ಎಲ್ಲೂ ಹೇಳಿಲ್ಲ. ಪಿರ್ಯಾದಿ ಗಲಾಟೆ ಮಾಡಿದಾಗ ನಾನು, ನನ್ನ ಹೆಂಡತಿ ಮತ್ತು ನನ್ನ ಸ್ನೇಹಿತರು ಹೋಗಿ ಹೋಟೆಲ್ ನಲ್ಲಿ ನಗದು ರೂಪದಲ್ಲಿ ನಾಲ್ಕು ಲಕ್ಷ ಹಣ ಕೊಟ್ಟೆವು. ಪಿರ್ಯಾದಿಗೆ ಹಣ ಕೊಟ್ಟಾಗ ಅವರಿಂದ ಯಾವುದೇ ಬರೆಸಿಕೊಂಡಿಲ್ಲ. ಪಿರ್ಯಾದಿಗೆ ನಾನು ಭದ್ರತೆಗಾಗಿ ಚೆಕ್ ಗಳು, ಆನ್‌ಡಿಮಾಂಡ್ ಪ್ರನೋಟ್ ಗಳನ್ನು ಕೊಟ್ಟಿದ್ದೆ ಎಂದು ಇದೇ ಮೊದಲ ಬಾರಿಗೆ ಹೇಳುತ್ತಿದ್ದೇನೆ, ನಿ.ಪಿ.೮ರಲ್ಲಿ ಹೇಳಿಲ್ಲ.

5. ನಾನು ಮತ್ತು ನನ್ನ ಹೆಂಡತಿ ನಮ್ಮ ಮನೆಯ ಗೃಹ ಉಪಯೋಗಕ್ಕೆ ನಾಲ್ಕು ಲಕ್ಷ ಹಣವನ್ನು ಪಿರ್ಯಾದಿಯಿಂದ ಪಡೆದು ಸದರಿ ಮೊತ್ತವನ್ನು ಮರುಪಾವತಿಸಲು ಪ್ರಶ್ನಿತ ಚೆಕ್ ಗಳನ್ನು ಕೊಟ್ಟಿದ್ದರೂ ಸಹ ಈಗ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಖಾಲಿ ಚೆಕ್ ಗಳನ್ನು ಪಿರ್ಯಾದಿ ದುರುಪಯೋಗಪಡಿಸಿಕೊಂಡಿದ್ದಾರೆಂದು ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ. ದುಡ್ಡನ್ನು ಮರುಪಾವತಿಸಿದ ನಂತರ ಅವರ ಬಳಿ ಇದ್ದಂತಹ ಚೆಕ್ ಗಳನ್ನು ಹಿಂತಿರುಗಿಸಿ ಎಂದು ಯಾವುದೇ ನೋಟೀಸ್ ಕೊಟ್ಟಿಲ್ಲ. ಪಿರ್ಯಾದಿಯಿಂದ ನಮ್ಮ ಗೃಹ ಬಳಕೆಗೆ ಸಾಲವನ್ನು ಪಡೆದು ಅದನ್ನು ನಮ್ಮ ಗೃಹ ಬಳಕೆಗೆ ಉಪಯೋಗಿಸಿಕೊಂಡು ಈಗ ಮರುಪಾವತಿಸದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಿರ್ಯಾದಿಯು ನಮ್ಮಿಂದ ಭದ್ರತೆಗಾಗಿ ಯಾವುದೇ ಚೆಕ್ ಗಳನ್ನು ಪಡೆದಿಲ್ಲ, ಅವುಗಳನ್ನು ನಾನೇ ಸಾಲದ ಮರುಪಾವತಿಗಾಗಿ ಕೊಟ್ಟಿದ್ದು ಎಂದರೆ ಹೌದು. ನನ್ನ ಹಿಂದಿನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ. ಇ)**

**2ನೇ ಹೆಚ್ಚುವರಿ ಲಘು ವ್ಯವಹಾರಗಳ**

**ನ್ಯಾಯಾಧೀಶರು, ಬೆಂಗಳೂರು.**